


ಎಡದಿಂದ ಬಲಕ್ಕೆ:

1. ಆ ವಾದ್ಯ ವಾದನ ವಿಧಾನ ಕುರಿತಂತೆ ಭಿನ್ನಮತ–ಚರ್ಚೆ (3)
3. ಅವರ ಇಡೀ ಪರಿವಾರದ ಕುಲ–ಗೋತ್ರ ವಿವರ (3)
4. ಹೊನ್ನಿನ ಆಸೆಗಾಗಿ ಈ ಕಗ್ಗೊಲೆ (3)
6. ಪೆದ್ದನ ಕ್ಷೇಮಕ್ಕಾಗಿ ಕಷ್ಟಕಾಲಕ್ಕೆಂದಿಟ್ಟ ಹಣ (4)
7, ಹತ್ಯೆಗೊಂಡವನ ಬಗೆಗೂ ಇಂಥ ದ್ವೇಷವೇ? (4)
9. ಮರಕತ ಧರಿಸಿ ನಿಂತಿರುವಾತ ಲಕ್ಷ್ಮೀಪತಿ ತಾನೇ? (4)
11. ಅಲ್ಲಿ ಕೂತವರೆಲ್ಲ ತಂದ ಆಕ್ಷೇಪಣೆ ಹೇಗೆ? (4)
15. ತವರಿನತ್ತ ಪಯಣ–ಬೇಗ ಬೇಗ (3)
16. ಈ ಹೊರೆ ಹೊರಲೇಕೆ ಬೇಕು ಎಂಬ ಆಶಯ ಏಕೆ? (3)
17. ಪೂರ್ವ ಕಾಲದಿಂದಲೂ ಆರತಿಗೆ ಪರಿಮಳದ ವಸ್ತು (3)

ಮೇಲಿಂದ ಕೆಳಕ್ಕೆ:

1. ಒಳ್ಳೆಯವರು ಈಗೀಗ ತುಂಬ ಅಪರೂಪ (3)
2. ಹದವಾಗಿದ್ದದ್ದನ್ನು ಸುಟ್ಟುಹಾಕುವುದೇ? (3)
3. ಅಲ್ಲಿನ ಪ್ರಸಾದ ಬಹಳ ಪ್ರಖ್ಯಾತ (3)
5. ಈ ನಾಡಿಗೆ ಸೂಕ್ತವಾದದ್ದು ಪಾದ ಪ್ರಯಾಣ (3)
6. ಆಸರೆಯಾದವರ ಬಗೆಗೆ ತುಂಬ ಗೌರವ (3)
8. ವನರುಹದ ಸ್ವರೂಪ ತುಂಬ ಸೂಕ್ಷ್ಮ ನುಣುಪು (3)
10. ಆತಂಕಕ್ಕೆ ಕಾರಣವಾದದ್ದು ಸೂಜಿಗಲ್ಲಿನ ಗುಣ (3)
12. ಕಲ್ಲು ಕೆತ್ತುವ ಕಲೆಯ ಅಭ್ಯಸನ (3)
13. ಪಾರ್ವತಕ್ಕ ಮಾಡುದ್ದು ಭಾರೀ ಪಾಪದ ಕೆಲಸ (3)
14. ಪರಿಹಾರ ಒಂದಂಶ ಕಮ್ಮಿಯಾದರೂ ಏಟು (3)

## ಪದಬಂಧ: 17-6-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂವತ್ಸರ; 3. ನಿರೋಗ; 4. ಕ್ಷಣಿಕ; 6. ತಿರುಗಣಿ; 7. ಪರಕೆ; 9. ತಾಡಿಸು; 11. ನರಳು; 13. ಕಿವಿರು; 15. ಹುಡುಕಿಸು; 17. ತಳಿರು; 18. ಮನನ; 19. ಪುರಾತನ.

ಮೇಲಿಂದ ಕೇಲಕ್ಕೆ:

1. ಸಂಗತಿ; 2. ರಕ್ಷಣೆ; 3. ನಿರ್ಧಾರ; 5. ಕರಡಿ; 7. ಪವನ; 8. ಕೆರಳು; 9. ತಾಟಕಿ; 10. ಸುಮಾರು; 12. ರಕುತ; 14. ವಿಧಾನ; 15. ಹುರುಪು; 16. ಸುಮನ.

# ಕೀಟ ಪ್ರಪಂಚ

## ‘ಇರುವೆ’ - ಏನು ವೈಶಿಷ್ಟ್ಯ?

ಎಲ್ಲೆಲ್ಲೂ ಇರುವ ಇರುವೆ–ಅದೊಂದು ಕೀಟ. ಗೆದ್ದಲು ಜೇನ್ನೊಣಗಳಂತೆಯೇ ಇರುವೆಯೂ ಪ್ರಸಿದ್ಧ, ‘ರಾಣಿ’ ನೇತೃತ್ವದ ಸಾಂಘಿಕ ಬದುಕಿಗೆ, ವಿಸ್ಮಯದ ಸಂಪರ್ಕ ವ್ಯವಸ್ಥೆಗೆ, ಅಪಾರ ತ್ಯಾಗಬುದ್ಧಿಗೆ ಅತಿ ಸಮರ್ಥ ಜೀವನ ಕೌಶಲ್ಯಗಳಿಗೆ ಈ ತ್ರಿವಿಧ ಕೀಟಗಳೂ ಬಹಳ ವಿಖ್ಯಾತ.

ಹಾಗಿದ್ದರೂ ಈ ಮೂರರಲ್ಲೂ ಇರುವೆಗಳದೇ ಅತಿ ಹೆಚ್ಚು ವೈವಿಧ್ಯ, ಅತಿ ಹೆಚ್ಚು ‘ಜನಸಂಖ್ಯೆ’, ಅತಿ ವಿಸ್ತಾರ ವಾಸಕ್ಷೇತ್ರ. ಸೂಜಿ ಮೊನೆಯಷ್ಟೇ ಗಾತ್ರದಿಂದ ಎರಡು ಸೆಂಟಿಮೀಟರ್‌ವರೆಗೆ ಅವುಗಳದು ಭಾರೀ ಗಾತ್ರಾಂತರ ಕೂಡ. ವೈಜ್ಞಾನಿಕ ಲೆಕ್ಕಾಚಾರಗಳ ಪ್ರಕಾರ ಪ್ರಪಂಚದಲ್ಲಿರುವ ಇರುವೆ ಸಂಖ್ಯೆ ಒಂದು ನೂರು ಕೋಟಿ ಕೋಟಿ! ಎಂದರೆ ಪ್ರತಿ ಮನುಷ್ಯರಿಗೂ ಸುಮಾರು ಹದಿನೈದು ಲಕ್ಷ ಇರುವೆಗಳು. ಧರೆಯಲ್ಲಿರುವ ಎಲ್ಲ ಇರುವೆಗಳ ಇಟ್ಟು ತೂಕ ಒಂದು ಲಕ್ಷ ಟನ್. ಪ್ರತಿ ಕುಟುಂಬದ ಸರಾಸರಿ ಸದಸ್ಯ ಸಂಖ್ಯೆ ಎರಡು ಲಕ್ಷ. ಈ ವರೆಗೆ ಗುರುತಿಸಿರುವ ಇರುವೆ ಪ್ರಭೇದಗಳು ಸಮೀಪ ಒಂಬತ್ತು ಸಾವಿರ.

ಅದೆಲ್ಲ ಏನೇ ಇರಲಿ, ವಿಸ್ಮಯ ಏನೆಂದರೆ ಇರುವೆಗಳು ಕೆಲವಾರು ‘ಮನುಷ್ಯ ಸದೃಶ’ ಜೀವನ ತಂತ್ರಗಳನ್ನು ರೂಢಿಸಿಕೊಂಡಿವೆ. ಅದೇ ಅವುಗಳ ಪರಮ ವೈಶಿಷ್ಟ್ಯ. ಅಂಥ ಮೂರು ಪ್ರಧಾನ ಅಂಶಗಳು:

ಬಲಿಷ್ಟ ಕೋರೆದಾಡೆಗಳಿರುವ ಕೆಲ ಇರುವೆ ಪ್ರಭೇದಗಳು ಇತರ ಕೆಲವು



ನಿರ್ದಿಷ್ಟ ಇರುವೆ ಪ್ರಭೇದಗಳ ಗೂಡುಗಳ ಒಳಹೊಕ್ಕು, ಅಲ್ಲಿನ ಸೈನಿಕರನ್ನು ಸೆದೆಬಡಿದು ಆ ಗೂಡಿನ ‘ಮರಿಹುಳು’ಗಳನ್ನು ತಮ್ಮ ಗೂಡಿಗೆ ಹೊತ್ತು ತರುತ್ತವೆ. ಆ ಮರಿ ಹುಳುಗಳು ವಯಸ್ಕರಾದೊಡನೆ ಕೆಲಸಗಾರರಾಗಿ ಗುಲಾಮರಾಗಿ ತಮ್ಮ ಭಯಂಕರ ಒಡೆಯರ ಸೇವೆ ಕೈಗೊಳ್ಳುತ್ತವೆ; ಆಹಾರ ತಂದು ಬಾಯಿಗೇ ಕೊಟ್ಟು ತಿನ್ನಿಸುತ್ತ ಜೀತದಾಳುಗಳಾಗಿರುತ್ತವೆ. ಹೀಗೆ ಒತ್ತಾಸೆಯಿಂದ ಗುಲಾಮರನ್ನಿರಿಸಿಕೊಳ್ಳುವ ಕ್ರಮ ಕೀಟಲೋಕದಲ್ಲಿ ಇನ್ನೆಲ್ಲೂ ಇಲ್ಲ.

ಕೆಲ ಇತರ ಕೀಟಗಳನ್ನು ಹಿಡಿದು ತಂದು ‘ಹಸು’ಗಳಂತೆ ಸಾಕಿಕೊಳ್ಳುವ ಇರುವೆ ಪ್ರಭೇದಗಳಿವೆ. ಪ್ರತಿ ದಿನ ಗೂಡಿನ ಹೊರಕ್ಕೆ ಕರೆತಂದು, ಕಾವಲು ಕಾಯ್ದು, ಆಹಾರ ಮೇಯಲು ಬಿಟ್ಟು, ಮತ್ತೆ ಗೂಡಿನೊಳಕ್ಕೆ ಕರೆದೊಯ್ದು ಆ ಕೀಟಗಳು ದೇಹದಿಂದ ಸ್ರವಿಸುವ ‘ಸಿಹಿ ದ್ರವ’ವನ್ನು ಎಲ್ಲ ಇರುವೆಗಳೂ ಸೇವಿಸುತ್ತವೆ. ಇಂಥ ‘ಪಶು ಸಂಗೋಪನಾ ಕ್ರಮ’ ಬೇರೆ ಯಾವ ಮಾನವೇತರ ಪ್ರಾಣಿಗೂ ಸಿದ್ಧಿಸಿಲ್ಲ.

ಸಮರ್ಥ ‘ರೈತ’ರಾಗಿರುವ ಇರುವೆ ಪ್ರಭೇದಗಳು ಕೆಲವಾರಿವೆ. ಸಸ್ಯಗಳ ಎಲೆಗಳನ್ನು ಕತ್ತರಿಸಿ ಗೂಡಿನೊಳಗೆ ರಾಶಿ ಹಾಕಿ, ನಿರ್ದಿಷ್ಟ ಶಿಲೀಂಧ್ರಗಳನ್ನು ಬೆಳೆಸಿ ತನ್ಮೂಲಕ ಎಲೆಗಳನ್ನು ಆಹಾರವನ್ನಾಗಿಸಿಕೊಳ್ಳುವ ಈ ಕೃಷಿ ಕಾರ್ಯಕ್ರಮ ಬೇರೆ ಯಾವ ಮನುಷ್ಯೇತರ ಪ್ರಾಣಿಯಲ್ಲೂ ರೂಢಿಯಲ್ಲಿಲ್ಲ.

■ ಎನ್. ವಾಸುದೇವ್